

ಬೆಂಗಳೂರಿನ ಕೋರ್ ಆಫ್ ಮಿಲಿಟರಿ ಪೊಲೀಸ್ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ಅಗ್ನಿವೀರ ಮಹಿಳಾ ಯೋಧರ ತಂಡ.

# ಅಗ್ನಿಪಥದಲ್ಲಿ ಮಹಿಳಾ ಹೆಜ್ಜೆಗಳು

**‘ಅಗ್ನಿಪಥ’ ಯೋಜನೆಯ ಮೂಲಕ ಸೇನೆಗೆ ಬಲ ತುಂಬಲು ಕೇಂದ್ರ ಸರ್ಕಾರ ಮುಂದಾಗಿದೆ. ಈ ಯೋಜನೆಯಡಿ ದೇಶದ ವಿವಿಧ ಭಾಗಗಳಲ್ಲಿನ ನೂರು ಯುವತಿಯರು ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಈ ‘ಅಗ್ನಿವೀರ’ರನ್ನು ‘ಸುಧಾ’ ಮಾತನಾಡಿಸಿದೆ.**

■ ಸಚ್ಚಿದಾನಂದ ಕುರಗುಂದ

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

‘ನಿಮ್ಮಲ್ಲಿ ಛಲ ಇದೆಯೇ?’ ಭಾರತೀಯ ಸೇನೆಯ ಈ ಜಾಹೀರಾತು ಯುವತಿಯರ ಮನದಲ್ಲಿ ಹೊಸ ಕನಸೊಂದು ಬಿತ್ತಿದೆ. ಸಾಹಸ ಪ್ರದರ್ಶನ, ದೇಶಸೇವೆಯಲ್ಲಿ ಭಾಗಿಯಾಗುವ ಅವಕಾಶವನ್ನು ಕಲ್ಪಿಸಿದೆ. ಸೇನೆಯಲ್ಲೂ ಹೆಣ್ಣಿನ ರುಜುವನ್ನು ಗಾಢವಾಗಿಸಲು ಹಲವು ಯುವತಿಯರು ಮುಂದಾಗಲು ಪ್ರೇರಣೆಯಾಗಿದೆ.

ತಮಿಳುನಾಡಿನ ವಿದುರಾನಗರ ಜಿಲ್ಲೆಯ ಮುತ್ತಂಡಿ ಗ್ರಾಮದ ಕವಿತಾ ಅವರ ಕಥೆ ಕೇಳಿ. ಸೇನೆ ಸೇರುವ ಧ್ಯೇಯದೊಂದಿಗೆ ಹೆಜ್ಜೆ ಹಾಕಿರುವ ಅವರು, ಬೆಂಗಳೂರಿನ ಮಿಲಿಟರಿ ಪೊಲೀಸ್ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

‘ನಾನು ಸೇನೆಯನ್ನು ಅಪಾರವಾಗಿ ಪ್ರೀತಿಸುತ್ತೇನೆ. ಸೇನೆಯಲ್ಲಿ ಕಾರ್ಯ ನಿರ್ವಹಿಸಬೇಕೆನ್ನುವುದು ನನ್ನ ಕನಸು. ಅದೀಗ ನನಸಾಗಿದೆ. ದೇಶಸೇವೆಯಲ್ಲಿ ಭಾಗಿಯಾಗುವ ಸಂಕಲ್ಪ ಈಡೇರಿದೆ. ನನ್ನ ತಂದೆ ಚಾಲಕ. ಬದುಕಿನಲ್ಲಿ ಹಲವು ಸವಾಲುಗಳು ಎದುರಾದರೂ ಅವರು ಎದೆಗುಂದಲಿಲ್ಲ’ ಎಂದು ಕವಿತಾ ಹೇಳುತ್ತಾರೆ.

ಬದುಕಿನಲ್ಲಿ ಎದೆಗುಂದದ ಅಪ್ಪನ ಮಗಳು ಕವಿತಾ ಕೂಡ ಸವಾಲುಗಳ ಹಾದಿಯಲ್ಲಿ ಹಿಂಜರಿಯುವ ಮನೋಭಾವದವರಲ್ಲ. ‘ಮಿಲಿಟರಿ ಪೊಲೀಸ್’ನಲ್ಲಿ ತರಬೇತಿ ಪಡೆಯುತ್ತಿರುವ ಅವರು, ಬದುಕಿನಲ್ಲಿ ದೃಢವಾದ ಹೆಜ್ಜೆಗಳನ್ನು ಇರಿಸಿದಂತೆ, ಈಗ ಪ್ರತಿನಿತ್ಯ ತರಬೇತಿ ಕೇಂದ್ರದ ಮೈದಾನದಲ್ಲಿ ನಡೆಯುವ ಪಥಸಂಚಲನದಲ್ಲೂ ದೃಢ ಹೆಜ್ಜೆಗಳನ್ನು ಇರಿಸುತ್ತಿದ್ದಾರೆ.

ಸೇನೆಯಲ್ಲಿ ಮಹಿಳೆಯರ ಸೇವೆಗೆ ದಶಕಗಳ ಇತಿಹಾಸವಿದೆ. ವೈದ್ಯರಾಗಿ, ಕಮಿಷನ್ಡ್ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ಸಾಹಸಿ ಮಹಿಳೆಯರ ಸಂಖ್ಯೆ ದೊಡ್ಡದಿದೆ. ಈಗ ಯೋಧರಾಗಿಯೂ ಸೇನೆಗೆ ಸೇರ್ಪಡೆಯಾಗುತ್ತಿದ್ದಾರೆ. ಗಡಿಯಲ್ಲಿ ಶತ್ರುಗಳ ದಾಳಿಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸುವ ಕಾರ್ಯಾಚರಣೆಯಲ್ಲಿ ಭಾಗಿಯಾಗುತ್ತಿದ್ದಾರೆ. ‘ಅಗ್ನಿಪಥ’ ಯೋಜನೆ ಜಾರಿಯಾದ ಬಳಿಕ ‘ಅಗ್ನಿವೀರ’ರಾಗಿ ತಮ್ಮದೇ ಆದ ಯಶೋಗಾಥೆ ಬರೆಯಲು ತವಕಿಸುತ್ತಿದ್ದಾರೆ.

### ಬೆಂಗಳೂರಿನಲ್ಲಿ ತರಬೇತಿ

ಬೆಂಗಳೂರಿನ ನೀಲಸಂದ್ರದಲ್ಲಿರುವ ‘ಕೋರ್ ಮಿಲಿಟರಿ ಪೊಲೀಸ್’ (ಸಿಎಂಪಿ) ಕೇಂದ್ರದಲ್ಲಿ ಮಿಲಿಟರಿ ಪೊಲೀಸ್ ವಿಭಾಗಕ್ಕೆ ಆಯ್ಕೆಯಾದ ಯುವತಿಯರಿಗೆ ಕಠಿಣ ತರಬೇತಿ ನೀಡಲಾಗುತ್ತಿದೆ. ದೇಶದಾದ್ಯಂತ ಸಲ್ಲಿಕೆಯಾಗಿದ್ದ 2.5 ಲಕ್ಷ ಅರ್ಜಿಗಳಲ್ಲಿ, 100 ಯುವತಿಯರನ್ನು ಮಾತ್ರ ಆಯ್ಕೆ ಮಾಡಲಾಗಿದೆ.

ತರಬೇತಿಗೆ ಬಂದಾಗ ಯುವತಿಯರು ನೀಳಕೇಶಿಯರಾಗಿದ್ದರು. ಈಗ ಅವರು ‘ಬಾಬ್‌ಕಟ್’ ಸುಂದರಿಯರು. ಕಠಿಣ ತರಬೇತಿಗೆ ದೇಹ ಬಳಲಿದಂತೆ ಕಂಡರೂ, ಅವರ ಮೊಗದಲ್ಲಿನ